.All India Radio: Bangalore

National Bulletins In Kannada

04.07.2025 19.35 hrs

ಆಕಾಶವಾಣಿ, ಬೆಂಗಳೂರು

ರಾಷ್ಟ್ರೀಯ ವಾರ್ತೆಗಳು

**<><*<><>*><>**

ಮುಖ್ಯಾಂಶಗಳು

- ಐದು ರಾಷ್ಟ್ರಗಳ ಪ್ರವಾಸದ ಭಾಗವಾಗಿ, ಪ್ರಧಾನಿ ನರೇಂದ್ರ ಮೋದಿ ಅರ್ಜೆಂಟೀನಾಕ್ಕೆ ಭೇಟಿ
- ಕಳೆದ ಒಂದು ದಶಕದಲ್ಲಿ ೨೮ ಕೋಟಿಗೂ ಹೆಚ್ಚು ಉದ್ಯೋಗಾವಕಾಶ ಸೃಷ್ಟಿಸಿದ ಎಮ್‌ಎಸ್‌ಎಮ್‌ಇ ವಲಯ: ಕೇಂದ್ರ ಸಚಿವ ಜಿತನ್ ರಾಮ್ ಮಾಂಝಿ
- ಮುಂದಿನ ವರ್ಷದ ಹಜ್ ಯಾತ್ರೆಗೆ ಇನ್ನೊಂದು ವಾರದೊಳಗೆ ಅರ್ಜಿ ಸ್ವೀಕಾರ; ಕಾಲಮಿತಿಯೊಳಗೆ ಅರ್ಜಿ ಸಲ್ಲಿಸಲು ಮನವಿ
- ಮಹಿಳಾ ಟಿ-೨೦ ಕ್ರಿಕೆಟ್; ದ್ವಿಪಕ್ಷೀಯ ಸರಣಿಯ ಮೂರನೇ ಪಂದ್ಯದಲ್ಲಿ ಇಂದು ಭಾರತ, ಇಂಗ್ಲೆಂಡ್ ಸೆಣಸು

**<><*<><>*><>**

ತಮ್ಮ ಐದು ರಾಷ್ಟ್ರಗಳ ಪ್ರವಾಸದ ಭಾಗವಾಗಿ, ಪ್ರಧಾನಿ ನರೇಂದ್ರ ಮೋದಿ ಇಂದು ಮತ್ತು ನಾಳೆ ಅರ್ಜೆಂಟೀನಾದಲ್ಲಿ ಇರಲಿದ್ದಾರೆ. ಪ್ರಧಾನಿ ಅವರು, ಅರ್ಜೆಂಟೀನಾ ಅಧ್ಯಕ್ಷ ಜೇವಿಯರ್ ಮಿಲಿ ಅವರನ್ನು ಭೇಟಿ ಮಾಡಲಿದ್ದು, ವ್ಯಾಪಾರ ಮತ್ತು ಆರ್ಥಿಕತೆಯ ಕುರಿತು ಚರ್ಚೆ ನಡೆಸಲಿದ್ದಾರೆ. ಅರ್ಜೆಂಟೀನಾ ಪ್ರಮುಖ ಆರ್ಥಿಕ ಸುಧಾರಣೆಗಳನ್ನು ಕೈಗೊಳ್ಳುತ್ತಿರುವಾಗ ಪ್ರಧಾನಿಯವರ ಈ ಭೇಟಿ ಮಹತ್ವ ಪಡೆದಿದೆ. ಇದು ಈ ಹಿಂದೆ ಭಾರತವು ಅನುಸರಿಸಿದ್ದ ಕ್ರಮವನ್ನು ಹೋಲುತ್ತದೆ. “ಭಾರತ ಮತ್ತು ಅರ್ಜೆಂಟೀನಾ ನಡುವಿನ ದ್ವಿಪಕ್ಷೀಯ ವ್ಯಾಪಾರವು ಸುಮಾರು ೫ ಶತಕೋಟಿ ಅಮೆರಿಕನ್ ಡಾಲರ್‌ಗಳಷ್ಟಿದೆ. ಉಭಯ ದೇಶಗಳ ನಡುವಿನ ಸಾಂಪ್ರದಾಯಿಕ ವ್ಯಾಪಾರವು ಪೆಟ್ರೋಲಿಯಂ ತೈಲ, ಕೃಷಿ ರಾಸಾಯನಿಕಗಳು, ಸಸ್ಯಜನ್ಯ ಎಣ್ಣೆ, ಚರ್ಮ ಇತ್ಯಾದಿ ಕ್ಷೇತ್ರಗಳ ಮೇಲೆ ಕೇಂದ್ರೀಕೃತವಾಗಿತ್ತು,. ಆದಾಗ್ಯೂ, ಇತ್ತೀಚೆಗೆ, ಉಭಯ ದೇಶಗಳ ನಡುವೆ ಸಹಕಾರದ ಹೊಸ ಕ್ಷೇತ್ರಗಳು ರೂಪಿತಗೊಂಡಿವೆ. ಲಿಥಿಯಂ, ತಾಮ್ರ ಮತ್ತು ಇತರ ಅಪರೂಪದ ನಿರ್ಣಾಯಕ ಖನಿಜಗಳ ಅರ್ಜೆಂಟೀನಾದ ಸಮೃದ್ಧ ನಿಕ್ಷೇಪಗಳು, ಭಾರತದ ಶುದ್ಧ ಇಂಧನ ಪರಿವರ್ತನೆಗಾಗಿ ಸುರಕ್ಷಿತ ಮತ್ತು ಸುಸ್ಥಿರ ಪೂರೈಕೆಗಳ ಅಗತ್ಯವನ್ನು ಪೂರೈಸುತ್ತವೆ. ಮತ್ತೊಂದೆಡೆ, ರಕ್ಷಣಾ ಉತ್ಪಾದನೆ, ಬಾಹ್ಯಾಕಾಶ ವಲಯ ಮತ್ತು ಮಾಹಿತಿ ತಂತ್ರಜ್ಞಾನದಂತಹ ಹೊಸ ಕ್ಷೇತ್ರಗಳಲ್ಲಿ ಭಾರತದ ಪ್ರಗತಿಗಳು ಅರ್ಜೆಂಟೀನಾಕ್ಕೆ ಅಮೂಲ್ಯವಾದ ಪರಿಣತಿಯನ್ನು ನೀಡಬಲ್ಲವು. ಟೆಲಿಮೆಡಿಸಿನ್ ಮತ್ತು ಡಿಜಿಟಲ್ ಆರೋಗ್ಯ ರಕ್ಷಣಾ ಪರಿಹಾರಗಳಲ್ಲಿ ಭಾರತದ ಪರಿಣತಿಯು ಅರ್ಜೆಂಟೀನಾಕ್ಕೆ ಕೈಗೆಟುಕುವ ಮತ್ತು ಗುಣಮಟ್ಟದ ಆರೋಗ್ಯ ರಕ್ಷಣೆಯ ವಿತರಣೆಯನ್ನು ಸುಧಾರಿಸುವಲ್ಲಿ ಸಹಾಯ ಮಾಡುತ್ತದೆ.

**<><*<><>*><>**

ಟ್ರಿನಿಡಾಡ್ ಮತ್ತು ಟೊಬೆಗೊದಲ್ಲಿರುವ ಭಾರತೀಯ ಮೂಲದ ಆರನೇ ತಲೆಮಾರಿನ ನಾಗರಿಕರು ಈಗ ಸಾಗರೋತ್ತರ ನಾಗರಿಕರ-ಒಸಿಐ ಕಾರ್ಡ್‌ಗಳಿಗೆ ಅರ್ಹರಾಗಿರುತ್ತಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಇಂದು ಘೋಷಿಸಿದ್ದಾರೆ. ಇದು ಅವರಿಗೆ ಭಾರತದಲ್ಲಿ ಯಾವುದೇ ನಿರ್ಬಂಧಗಳಿಲ್ಲದೆ ವಾಸಿಸಲು ಮತ್ತು ಕೆಲಸ ಮಾಡಲು ಅನುವು ಮಾಡಿಕೊಡಲಿದೆ. ಇಂದು ಬೆಳಿಗ್ಗೆ, ಟ್ರಿನಿಡಾಡ್ ಮತ್ತು ಟೊಬೆಗೊದಲ್ಲಿ ನಡೆದ ಕಾರ್ಯಕ್ರಮವೊಂದರಲ್ಲಿ ಮಾತನಾಡಿದ ಪ್ರಧಾನಿ, ಭಾರತೀಯ ಸಮುದಾಯವು, ತಮ್ಮ ಪೂರ್ವಜರ ಭೂಮಿಗೆ ಭೇಟಿ ನೀಡಿ, ಭಾರತದೊಂದಿಗೆ ತಮ್ಮ ಸಂಪರ್ಕವನ್ನು ಗಾಢವಾಗಿಸಿಕೊಳ್ಳುವಂತೆ ಪ್ರೋತ್ಸಾಹಿಸಿದರು. ಏತನ್ಮಧ್ಯೆ, ಟ್ರಿನಿಡಾಡ್ ಮತ್ತು ಟೊಬೆಗೊದ ಪ್ರಧಾನ

ಮಂತ್ರಿ ಕಮಲಾ ಪರ್ಸಾದ್-ಬಿಸ್ಸೆಸ್ಸರ್ ಅವರು, ಪ್ರಧಾನಿ ನರೇಂದ್ರ ಮೋದಿ ಅವರಿಗೆಗೆ ಕೆರಿಬಿಯನ್ ರಾಷ್ಟ್ರದ ಅತ್ಯುನ್ನತ ನಾಗರಿಕ ಗೌರವವಾದ 'ದಿ ಆರ್ಡರ್ ಆಫ್ ಟ್ರಿನಿಡಾಡ್ ಮತ್ತು ಟೊಬೆಗೊ' ಪ್ರಶಸ್ತಿಯನ್ನು ನೀಡುವುದಾಗಿ ಘೋಷಿಸಿದ್ದಾರೆ.

<><*<><>*><>

ಕಳೆದ ೧೦ ವರ್ಷಗಳಲ್ಲಿ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕೆ- ಎಮ್‌ಎಸ್‌ಎಮ್‌ಇ ಸಚಿವಾಲಯವು, ೨೮ ಕೋಟಿಗೂ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸಿದೆ ಎಂದು ಕೇಂದ್ರ ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಸಚಿವ ಜಿತನ್ ರಾಮ್ ಮಾಂಝಿ ಹೇಳಿದ್ದಾರೆ. ಮುಂಬೈನಲ್ಲಿಂದು ಸುದ್ದಿಗಾರರೊಂದಿಗೆ ಮಾತನಾಡಿದ ಸಚಿವರು, ಎಮ್‌ಎಸ್‌ಎಮ್‌ಇ ಸಚಿವಾಲಯವು, ದೇಶದ ಆರ್ಥಿಕ ಪ್ರಗತಿಗೆ ಮಹತ್ವದ ಕೊಡುಗೆ ನೀಡುತ್ತಿದ್ದು, ಒಟ್ಟು ಜಿಡಿಪಿ ಗೆ ಶೇಕಡಾ ೩೦ ರಷ್ಟು, ಉತ್ಪಾದನಾ ವಲಯಕ್ಕೆ ಶೇಕಡಾ ೩೫.೪ ರಷ್ಟು ಹಾಗೂ ದೇಶದ ಒಟ್ಟು ರಫ್ತಿಗೆ ಶೇಕಡಾ ೪೫.೭೩ ರಷ್ಟು ಕೊಡುಗೆ ನೀಡುತ್ತಿದೆ ಎಂದು ಅವರು ಒತ್ತಿ ಹೇಳಿದರು. ಕಳೆದ ಐದು ವರ್ಷಗಳಲ್ಲಿ ನೋಂದಾಯಿತ ಎಮ್‌ಎಸ್‌ಎಮ್‌ಇ ಘಟಕಗಳ ಸಂಖ್ಯೆ ೧೫ ಪಟ್ಟು ಹೆಚ್ಚಾಗಿದ್ದು, ಪ್ರಸ್ತುತ ಘಟಕಗಳ ಸಂಖ್ಯೆ ಒಟ್ಟು ೬ ಕೋಟಿ ೫೩ ಲಕ್ಷ ತಲುಪಿದೆ. ಇದೇ ಅವಧಿಯಲ್ಲಿ ಎಮ್‌ಎಸ್‌ಎಮ್‌ಇ ಘಟಕಗಳಿಗೆ ನೀಡಲಾದ ಸಾಲದ ಪ್ರಮಾಣದಲ್ಲಿ ನಾಲ್ಕು ಪಟ್ಟು ಹೆಚ್ಚಾಗಿದೆ ಎಂದು ಅವರು ಮಾಹಿತಿ ನೀಡಿದರು. 'ಪ್ರಧಾನ ಮಂತ್ರಿಗಳ ಉದ್ಯೋಗ ಸೃಷ್ಟಿ' ಯೋಜನೆಯಡಿ ೮೦ ಲಕ್ಷಕ್ಕೂ ಹೆಚ್ಚು ಉದ್ಯೋಗಾವಕಾಶಗಳನ್ನು ಸೃಷ್ಟಿಸಲಾಗಿದ್ದು, ಇದರಲ್ಲಿ ಶೇಕಡಾ ೮೦ ರಷ್ಟು ಗ್ರಾಮೀಣ ಪ್ರದೇಶಗಳಲ್ಲಿ ಸೃಷ್ಟಿಯಾಗಿದೆ. ಅನೌಪಚಾರಿಕ ಅಥವಾ ಅಸಂಘಟಿತ ವಲಯದಲ್ಲಿ ತೊಡಗಿರುವ ಉದ್ಯೋಗಿಗಳನ್ನು ಗುರಿಯಾಗಿರಿಸಿಕೊಂಡು ಜಾರಿಗೆ ತಂದಿರುವ 'ಪ್ರಧಾನ ಮಂತ್ರಿ ವಿಶ್ವಕರ್ಮ' ಯೋಜನೆಯಡಿ, ಸುಮಾರು ೧೦ ಲಕ್ಷ ನೋಂದಾಯಿತ ಕುಶಲಕರ್ಮಿಗಳು ಟೂಲ್‌ಕಿಟ್ ಪಡೆದು, ಯೋಜನೆಯ ಪ್ರಯೋಜನ ಪಡೆದಿದ್ದಾರೆ ಎಂದು ತಿಳಿಸಿದರು.

<><*<><>*><>

೨೦೨೬ರ ಹಜ್ ಯಾತ್ರೆಗೆ ಇನ್ನೊಂದು ವಾರದೊಳಗೆ ಅರ್ಜಿಗಳನ್ನು ಸ್ವೀಕರಿಸಲಾಗುವುದು ಎಂದು ಕೇಂದ್ರ ಅಲ್ಪಸಂಖ್ಯಾತ ವ್ಯವಹಾರಗಳ ಸಚಿವ ಕಿರಣ್ ರಿಜಿಜು ದೆಹಲಿಯಲ್ಲಿಂದು ಹೇಳಿದ್ದಾರೆ. ಹಜ್ ಪರಿಶೀಲನಾ ಸಭೆಯ ನಂತರ ಅವರು, ಕಾಲಮಿತಿಯೊಳಗೆ ಅರ್ಜಿ ನಮೂನೆ ಭರ್ತಿ ಮಾಡಿ ಸಲ್ಲಿಸಬೇಕೆಂದು ಮನವಿ ಮಾಡಿದ್ದಾರೆ. ಗಡುವಿಗೆ ಮೊದಲು ಸೌದಿ ಅರೇಬಿಯಾ ಸರ್ಕಾರಕ್ಕೆ ಹಣವನ್ನು ಜಮಾ ಮಾಡಲು ಭಾರತದ ಹಜ್ ಸಮಿತಿಗೆ ಸಚಿವರು ನಿರ್ದೇಶನ ನೀಡಿದ್ದಾರೆ. ೬೫ ವರ್ಷಕ್ಕಿಂತ ಮೇಲ್ಪಟ್ಟ ಯಾತ್ರಿಕರನ್ನು ನೋಡಿಕೊಳ್ಳಲು ಒಬ್ಬ ಸಹಾಯಕ ಕಡ್ಡಾಯ ಎಂದು ಸಚಿವರು ಹೇಳಿದ್ದಾರೆ. ಪುರುಷರು ಹಾಗೂ ಮಹಿಳೆಯರಿಗೆ ಪ್ರತ್ಯೇಕ ವಸತಿ ಸೌಕರ್ಯಕ್ಕಾಗಿ ಮಾಡಿಕೊಳ್ಳಲಾಗುವ ಮನವಿಗಳನ್ನು ಸರ್ಕಾರ ಪರಿಗಣಿಸುತ್ತದೆ ಎಂದರು. ೨೦೨೫ರ ಹಜ್ ಯಾತ್ರೆ, ದೇಶದ ಇತಿಹಾಸದಲ್ಲಿ ಸರ್ಕಾರ ನಡೆಸಿದ ಅತ್ಯುತ್ತಮ ಹಜ್ ಯಾತ್ರೆಯಾಗಿದೆ. ಕಳೆದ ವರ್ಷದ ಯಾತ್ರೆಯ ವೇಳೆ ೨೨೦ ಮಂದಿ ಮೃತಪಟ್ಟಿದ್ದರು. ಆದರೆ, ಈ ವರ್ಷ ಸಾವಿನ ಪ್ರಮಾಣ ೬೪ಕ್ಕೆ ಇಳಿದಿದೆ. ಈ ವರ್ಷದ ಹಜ್ ಯಶಸ್ವಿಗೆ ಅಲ್ಪಸಂಖ್ಯಾತ ವ್ಯವಹಾರಗಳು, ವಿದೇಶಾಂಗ ವ್ಯವಹಾರಗಳ ಹಾಗೂ ನಾಗರಿಕ ವಿಮಾನಯಾನ, ಆರೋಗ್ಯ ಸಚಿವಾಲಯದ ಸಂಘಟಿತ ಪ್ರಯತ್ನಗಳು ಕಾರಣ ಎಂದು ಸಚಿವರು ತಿಳಿಸಿದ್ದಾರೆ.

<><*<><>*><>

ಏಷ್ಯಾದ ಅತ್ಯಂತ ಹಳೆಯ ಫುಟ್ಬಾಲ್ ಪಂದ್ಯಾವಳಿಯಾದ ಡ್ಯುರಾಂಡ್ ಕಪ್ ಫುಟ್ಬಾಲ್ ಪಂದ್ಯಾವಳಿ ೨೦೨೫ರ ಟ್ರೋಫಿಗಳನ್ನು ನವದೆಹಲಿಯಲ್ಲಿಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅನಾವರಣಗೊಳಿಸಿ, ಉದ್ಘಾಟಿಸಿದರು. ನಂತರ ಸಭೆಯನ್ನುದ್ದೇಶಿಸಿ ಮಾತನಾಡಿದ ಅವರು, ಕ್ರೀಡೆಗಳು ಶಿಸ್ತು, ದೃಢನಿಶ್ಚಯಗಳನ್ನು ಉತ್ತೇಜಿಸುತ್ತವೆ. ಕ್ರೀಡೆ, ಜನರು, ಪ್ರದೇಶಗಳು ಮತ್ತು ದೇಶಗಳನ್ನು

ಸಂಪರ್ಕಿಸುವ ವಿಶಿಷ್ಟ ಶಕ್ತಿಯನ್ನು ಹೊಂದಿದೆ. ಭಾರತದಲ್ಲಿ, ಕ್ರೀಡೆಗಳು ರಾಷ್ಟ್ರೀಯ ಏಕೀಕರಣಕ್ಕೆ ಪ್ರಬಲ ಸಾಧನವಾಗಿದೆ ಎಂದು ಹೇಳಿದರು. ಫುಟ್ಬಾಲ್ ಎಂದರೆ ತಂತ್ರ, ಸಹಿಷ್ಣುತೆ ಮತ್ತು ಸಾಮಾನ್ಯ ಗುರಿಯತ್ತ ಒಟ್ಟಾಗಿ ಕೆಲಸ ಮಾಡುವುದು ಎಂದು ಉಲ್ಲೇಖಿಸಿದ ಅವರು, ಡ್ಯುರಾಂಡ್ ಕಪ್‌ನಂತಹ ಪಂದ್ಯಾವಳಿಗಳು, ಆಟದ ಉತ್ಸಾಹವನ್ನು ಬೆಳೆಸುವುದಲ್ಲದೆ, ಮುಂದಿನ ಪೀಳಿಗೆಯ ಫುಟ್‌ಬಾಲ್ ಆಟಗಾರರನ್ನು ಅಭಿವೃದ್ಧಿಪಡಿಸಲು ಸಹಾಯ ಮಾಡುತ್ತವೆ ಎಂದು ರಾಷ್ಟ್ರಪತಿಗಳು ಶ್ಲಾಘಿಸಿದರು. ಡ್ಯುರಾಂಡ್ ಕಪ್‌ನ ೨೦೨೫ ರ ಆವೃತ್ತಿಯು ಇದೇ ೨೩ ರಿಂದ ಆಗಸ್ಟ್ ೨೩ ರವರೆಗೆ ಪಶ್ಚಿಮ ಬಂಗಾಳ, ಅಸ್ಸಾಂ, ಮಣಿಪುರ, ಮೇಘಾಲಯ ಮತ್ತು ಜಾರ್ಖಂಡ್ ಸೇರಿದಂತೆ ಐದು ಭಾರತೀಯ ರಾಜ್ಯಗಳ ಆರು ಸ್ಥಳಗಳಲ್ಲಿ ನಡೆಯಲಿದೆ.

<><*<><>*><>

ರಾಷ್ಟ್ರೀಯ ಗ್ರಾಹಕ ಸಹಾಯವಾಣಿ- ಎನ್‌ಸಿಎಚ್, ಕಳೆದ ಎರಡು ತಿಂಗಳಲ್ಲಿ ಗ್ರಾಹಕರಿಗೆ ಏಳು ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮರುಪಾವತಿಯನ್ನು ಯಶಸ್ವಿಯಾಗಿ ಒದಗಿಸಿದೆ. ೩೦ ವಲಯಗಳಲ್ಲಿ ಈ ಮಹತ್ವದ ಪರಿಹಾರವನ್ನು ಸಾಧಿಸಲಾಗಿದ್ದು, ಮರುಪಾವತಿ ಹಕ್ಕುಗಳಿಗೆ ಸಂಬಂಧಿಸಿದ ೧೫ ಸಾವಿರಕ್ಕೂ ಹೆಚ್ಚು ಗ್ರಾಹಕರ ದೂರುಗಳನ್ನು ಪರಿಣಾಮಕಾರಿಯಾಗಿ ಪರಿಹರಿಸಲಾಗಿದೆ.

<><*<><>*><>

ಗುಜರಾತ್, ಹಿಮಾಚಲ ಪ್ರದೇಶ, ರಾಜಸ್ಥಾನ, ಉತ್ತರಾಖಂಡ ಮತ್ತು ಛತ್ತೀಸ್‌ಗಢದಲ್ಲಿ ಸುರಿಯುತ್ತಿರುವ ಭಾರೀ ಮಳೆಯ ಹಿನ್ನೆಲೆಯಲ್ಲಿ ಆಯಾ ರಾಜ್ಯಗಳ ಮುಖ್ಯಮಂತ್ರಿಗಳೊಂದಿಗೆ, ಕೇಂದ್ರ ಗೃಹ ಸಚಿವ ಅಮಿತ್ ಶಾ ಇಂದು ಮಾತುಕತೆ ನಡೆಸಿದರು. ಈ ಕುರಿತು ಸಾಮಾಜಿಕ ಮಾಧ್ಯಮ ಪೋಸ್ಟ್ ಮಾಡಿರುವ ಸಚಿವರು, ಪರಿಸ್ಥಿತಿಯ ಅನುಗುಣವಾಗಿ ಎನ್‌ಡಿಆರ್‌ಎಫ್ ತಂಡಗಳನ್ನು ರಾಜ್ಯಗಳಲ್ಲಿ ನಿಯೋಜಿಸಲಾಗಿದೆ. ಅಗತ್ಯವಿದ್ದಲ್ಲಿ ಕೋರಿಕೆಯ ಮೇರೆಗೆ ಹೆಚ್ಚಿನ ತಂಡಗಳನ್ನು ಕಳುಹಿಸಲಾಗುವುದು. ಕೇಂದ್ರ ಸರ್ಕಾರದಿಂದ ಸಾಧ್ಯವಿರುವ ಎಲ್ಲಾ ಸಹಾಯವನ್ನು ಒದಗಿಸಲಾಗುವುದು ಎಂದು ಮುಖ್ಯಮಂತ್ರಿಗಳಿಗೆ ಸಚಿವ ಅಮಿತ್ ಶಾ ಭರವಸೆ ನೀಡಿದ್ದಾರೆ.

<><*<><>*><>

ಭಾರತದ ಅತಿದೊಡ್ಡ ಉಕ್ಕು ಉತ್ಪಾದಕರಲ್ಲಿ ಒಂದಾದ ಸಾರ್ವಜನಿಕ ವಲಯ ಉದ್ಯಮವಾದ ಭಾರತೀಯ ಉಕ್ಕು ಪ್ರಾಧಿಕಾರ ನಿಯಮಿತ- ಎಸ್.ಎ.ಐ.ಎಲ್, ದುಬೈನಲ್ಲಿ ತನ್ನ ಪ್ರಾತಿನಿಧಿಕ ಕಚೇರಿಯನ್ನು ಉದ್ಘಾಟಿಸಿದೆ. ಕೇಂದ್ರ ಉಕ್ಕು ಮತ್ತು ಭಾರೀ ಕೈಗಾರಿಕೆಗಳ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು, ಪಶ್ಚಿಮ ಏಷ್ಯಾದಲ್ಲಿ ಎಸ್.ಎ.ಐ.ಎಲ್ ನ ಮೊದಲ ಅಂತರರಾಷ್ಟ್ರೀಯ ಕಚೇರಿಯನ್ನು ಉದ್ಘಾಟಿಸಿದರು.

<><*<><>*><>

ರಾಷ್ಟ್ರೀಯ ಪಿಂಚಣಿ ವ್ಯವಸ್ಥೆ-ಎನ್‌ಪಿಎಸ್ ಅಡಿಯಲ್ಲಿ ಪ್ರಸ್ತುತ ಲಭ್ಯವಿರುವ ಎಲ್ಲಾ ತೆರಿಗೆ ಪ್ರಯೋಜನಗಳನ್ನು ಹೊಸದಾಗಿ ಪರಿಚಯಿಸಲಾದ ಏಕೀಕೃತ ಪಿಂಚಣಿ ಯೋಜನೆ-ಯುಪಿಎಸ್ ಗೂ ವಿಸ್ತರಿಸಲಾಗುವುದು ಎಂದು ಸರ್ಕಾರ ಘೋಷಿಸಿದೆ.

<><*<><>*><>

ಇಂಗ್ಲೆಂಡ್ ಕೆನ್ನಿಂಗ್ಟನ್ ಓವಲ್ ನಲ್ಲಿ ಇಂದು ನಡೆಯಲಿರುವ ಮಹಿಳಾ ಟಿ-೨೦ ಕ್ರಿಕೆಟ್ ಸರಣಿಯ ಮೂರನೇ ಪಂದ್ಯದಲ್ಲಿ ಭಾರತದ ವನಿತೆಯರು ಆತಿಥೇಯ ಇಂಗ್ಲೆಂಡ್ ತಂಡವನ್ನು ಎದುರಿಸಲಿದ್ದಾರೆ. ಐದು ಪಂದ್ಯಗಳ ಸರಣಿಯ ಮೊದಲರೆಡು ಪಂದ್ಯಗಳಲ್ಲಿ ಜಯ ಸಾಧಿಸಿರುವ ಭಾರತೀಯ ವನಿತೆಯರು, ೩ನೇ ಪಂದ್ಯದಲ್ಲೂ ಗೆದ್ದು ಸರಣಿಯನ್ನು ಕೈವಶಮಾಡಿಕೊಳ್ಳಲು ಎದುರು ನೋಡುತ್ತಿದ್ದಾರೆ. ಪಂದ್ಯ ಭಾರತೀಯ ಕಾಲಮಾನ ರಾತ್ರಿ ೧೧:೦೫ ಕ್ಕೆ ಆರಂಭವಾಗಲಿದೆ.

<><*<> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <>*><>

<><*<>ನಮ್ಮ ಮುಂದಿನ ವಾರ್ತಾ ಪ್ರಸಾರ ನಾಳೆ ಬೆಳಗ್ಗೆ ೭.೦೫ ಕ್ಕೆ <>*><>